**Praja Vani (Kannada Daily)**

Date: Saturday, August 10, 2013 Page No.2

Edition: Mysore Language: Kannada

# 'ಹಣಕಾಸು, ಆಡಳಿತದಲ್ಲಿ ಸಮಗ್ರ ಯೋಜನೆ ಅವಶ್ಯ'

ಪ್ರಜಾವಾಣಿ ವಾರ್ತೆ

ಮೈಸೂರು: 'ಹಣಕಾಸು, ಆಡಳಿತ ಮತ್ತು ವರದಿ ತಯಾರಿಕೆಗಳು ಪರಸ್ಪರ ಒಂದಕ್ಕೊಂದು ಸಂಪರ್ಕ ಹೊಂದಿದ್ದು, ದೊಡ್ಡ ಪರಿಸರದೊಂದಿಗೆ ಸಂಬಂಧವನ್ನು ಗಟ್ಟಿಯಾಗಿ ಹೊಂದಿವೆ. ಆದ್ದರಿಂದ ಕಾರ್ಪೊರೇಟ್ ಸಂಸ್ಥೆಗಳು ಸಮಗ್ರವಾದ ಯೋಜನೆ ರೂಪಿಸಿಕೊಳ್ಳಬೇಕು' ಎಂದು ಟಾಟಾ ಸ್ಟೀಲ್‌ನ ಕಾರ್ಯನಿರ್ವಾಹಕ ನಿರ್ದೇಶಕ ಮತ್ತು ಸಮೂಹ ಸಿಎಫ್‌ಒ ಕೌಶಿಕ್ ಚಟರ್ಜಿ ಹೇಳಿದರು.

ಎಸ್‌ಡಿಎಂ ವ್ಯವಸ್ಥಾಪನ ಅಭಿವೃದ್ಧಿ ಕಾಲೇಜಿನಲ್ಲಿ ಶುಕ್ರವಾರ ಅವರು 'ಹಣಕಾಸು ಮತ್ತು ಲೆಕ್ಕಶಾಸ್ತ್ರದಲ್ಲಿ ಪ್ರಸ್ತುತ ಬೆಳವಣಿಗೆಗಳು' ಕುರಿತು ಅಂತರರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

'ನಾವು ಕಲಿಯುವ ಥಿಯರಿ ಮತ್ತು ಪರಿಕಲ್ಪನೆಗಳು, ಪ್ರಯೋಗಾಲಯದ ಪಾಠಗಳು ವ್ಯವಹಾರಿಕ ಜಗತ್ತಿನೊಂದಿಗೆ ಹೆಚ್ಚು ಸಮ್ಮಿಳಿತವಾಗಿರುವುದಿಲ್ಲ. ಆದರೆ ಚೀನಾ, ಯುರೋಪ್, ಅಮೆರಿಕಗಳಲ್ಲಿ ಆಗುವ ಬೆಳವಣಿಗೆಗಳ ಪರಿಣಾಮ ಇಲ್ಲಿ ಮತ್ತು ಭಾರತದಲ್ಲಿ ಆಗುವ ಬದಲಾವಣೆಗಳು ಹಾಗೂ ಪರಿಣಾಮಗಳು ಅಲ್ಲಿ ಏನು ವ್ಯತ್ಯಾಸ ತರುತ್ತವೆ ಎಂಬುದು ಪ್ರಮುಖವಾಗುತ್ತದೆ. ಜಗತ್ತು ಪರಿಣಾಮಗಳ ಆಗರ. ಇದು ವಿಶ್ವ ಆರ್ಥಿಕ ನೀತಿಯ ಭಾಗವಾಗಿದೆ' ಎಂದು ನುಡಿದರು.

'ಇವತ್ತು ವ್ಯವಹಾರ ಕ್ಷೇತ್ರದಲ್ಲಿ ಮತ್ತು ಸಂಸ್ಥೆಗಳ ಆಡಳಿತದಲ್ಲಿ ಹಲವು ಒತ್ತಡಗಳಿವೆ. ಅದರಲ್ಲಿ ಪ್ರಮುಖವಾಗಿರುವುದು ವಿಶ್ವ ಆರ್ಥಿಕ ನೀತಿಯೊಂದಿಗೆ ಸರಿದೂಗಿಸುವುದು ಹೇಗೆ ಎಂಬುದು. ಬಂಡವಾಳ ಮತ್ತು ಸಂಪನ್ಮೂಲಗಳ ಕೊರತೆಯುಂಟಾದ ಸಂದರ್ಭದಲ್ಲಿ ವ್ಯವಹಾರದಲ್ಲಿ ಹೊಣೆಯ ಪರಿಮಾಣ ಹೆಚ್ಚಾಗುತ್ತದೆ. ಇದರಿಂದ ಸರಕುಗಳ ಮಾರಾಟ ಬೆಲೆ ಮತ್ತು ಇಂಧನ ಖರೀದಿಯ ಬೆಲೆಗಳಲ್ಲಿ ಏರುಪೇರಾಗುತ್ತದೆ' ಎಂದು ವಿವರಿಸಿದರು.



ಮೈಸೂರಿನ ಎಸ್‌ಡಿಎಂ ಮ್ಯಾನೇಜ್‌ಮೆಂಟ್ ಮತ್ತು ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಶುಕ್ರವಾರ ಅಂತರರಾಷ್ಟ್ರೀಯ ವಿಚಾರ ಸಂಕಿರಣದ ಸಿಡಿಯನ್ನು ಟಾಟಾ ಸ್ಟೀಲ್ ಕಾರ್ಯನಿರ್ವಾಹಕ ನಿರ್ದೇಶಕ ಕೌಶಿಕ್ ಚಟರ್ಜಿ ಬಿಡುಗಡೆ ಮಾಡಿದರು. ಎಸ್.ಆರ್. ಪರಶುರಾಮನ್, ಉಲ್ಲಾಸ್ ರಾವ್ ಮತ್ತು ಅನು ಮತ್ತಿತರರು ಹಾಜರಿದ್ದರು.

'ಸಾಮಾಜಿಕ ಭದ್ರತೆಯ ವೆಚ್ಚವು ಹೆಚ್ಚಾಗುತ್ತಿದೆ. ಆದರೆ ಇದರಿಂದ ಆಚೆ ಹೋಗಲು ನಮಗೆ ಸಾಧ್ಯವಾಗುವುದಿಲ್ಲ. ವಾಣಿಜ್ಯ ಸಂಸ್ಥೆಗಳು ಸಮಾಜದ ಎಲ್ಲ ಅಂಗಗಳನ್ನು ಪರಿಗಣಿಸಬೇಕು. ಕಾರ್ಪೊರೇಟ್ ಸಂಸ್ಥೆಗಳಲ್ಲಿ ಲೆಕ್ಕಪತ್ರಗಳ ಅವಲೋಕನ ಮುಖ್ಯವಾಗುತ್ತದೆ. ಈ ಎಲ್ಲ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸುವ ಅಗತ್ಯತೆ ಇದೆ' ಎಂದರು.

'ಉತ್ತಮ ಆಡಳಿತ ವ್ಯವಸ್ಥೆಯು ಮೌಲ್ಯಯುತವಾದುದು ಮತ್ತು ಬಹಳ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಯೋಜನೆ ರೂಪಿಸುವುದು ಬಹಳ ಮುಖ್ಯವಾಗಿದ್ದು, ಅಂತಿಮ ಹಂತದಲ್ಲಿ ತೆಗೆದುಕೊಳ್ಳುವ ತೀರ್ಮಾನಗಳು ಮುಖ್ಯವಾಗುತ್ತವೆ. ಆ ತೀರ್ಮಾನಗಳ ಮೇಲೆಯೇ ಲಾಭ, ನಷ್ಟಗಳು ನಿರ್ಧಾರವಾಗುತ್ತವೆ' ಎಂದರು.

ವಿಚಾರ ಸಂಕಿರಣದಲ್ಲಿ 90 ಮಂದಿ ಪ್ರತಿನಿಧಿಗಳು ಆಗಮಿಸಿದ್ದರು. ಅಮೆರಿಕ, ಆಸ್ಟ್ರೇಲಿಯಾ, ಇರಾನ್, ಅಫ್ಘಾನಿಸ್ತಾನ್, ಬಾಂಗ್ಲಾ ದೇಶ ಮತ್ತು ಯುಎಇಯಿಂದ ಪ್ರತಿನಿಧಿಗಳು ಆಗಮಿಸಿದ್ದರು.